## ನಿರಾಳವಾದ ಸುನಿಲ್

‘ಅವಳನ್ನು ಯಾರೋ ವ್ಯಾಪಾರಸ್ಥರ ಕುಟುಂಬದ ಶ್ರೀಮಂತ ಹುಡುಗನೊಬ್ಬ ಎಲ್ಲೋ ನೋಡಿದನಂತೆ.. ಒಳ್ಳೆಯ ಸಂಬಂಧ. ಎಲ್ಲಾ ಮಾತುಕತೆ ಆಯ್ತು. ಮದುವೆ ಡೇಟೂ ಫಿಕ್ಸ್ ಆಗಿ ಲಗ್ನಪತ್ರಿಕೇನೂ ಪ್ರಿಂಟ್ ಆಯ್ತು.. ಆವಾಗ ಈ ಗಿರಿಧರ ಮೈಸೂರಲ್ಲಿ ಎಂ.ಕಾಂ ಓದ್ತಾ ಇದ್ದ. ಮಳವಳ್ಳಿಗೆ ಬಂದಿದ್ದಾನೆ. ವಿಷಯ ಗೊತ್ತಾಗಿದೆ. ನಮ್ಮ ಚಿಕ್ಕಮ್ಮನ ಹತ್ತಿರ ಅಮ್ಮಾ.. ಅವಳನ್ನ ನಾನು ತುಂಬಾ ಪ್ರೀತಿಸ್ತಾ ಇದೀನಿ.. ಅವಳನ್ನ ಬಿಟ್ಟಿರೋದಿಕ್ಕೆ ಆಗೋದಿಲ್ಲ.. ಏನಾದ್ರೂ ಮಾಡಮ್ಮಾ.. ಎಂದು ಮನೆಯಲ್ಲಿ ಗೋಳೋ ಅಂತ ಅಳುತ್ತಾ ಕೂತಿದಾನೆ.. ನಮ್ಮ ಚಿಕ್ಕಮ್ಮ ಈಗ ಏನೂ ಮಾಡೋದಿಕ್ಕಾಗೋದಿಲ್ಲ.. ಸುಮ್ನೆ ಊರಿಗೆಲ್ಲಾ ಸುದ್ದಿ ತಿಳಿದು ಆ ಹುಡುಗಿಗೆ ಕೆಟ್ಟ ಹೆಸರು ಬರುತ್ತೆ ಅಂತ ಹೆದರಿಕೊಂಡು ಯಾರ ಹತ್ತಿರಾನೂ ಇದನ್ನ ಹೇಳದೆ ಮುಚ್ಚಿಟ್ಟು ಅವಳನ್ನ ಬಿಟ್ಟು ಈ ಪ್ರಪಂಚದಲ್ಲಿ ನಿನಗೆ ಬೇರೆ ಹೆಣ್ಣೇ ಇಲ್ಲವೇನೋ.. ಅವಳಿಗಿಂತ ಚೆನ್ನಾಗಿರೋಳನ್ನೇ ತರ್ತೀನಿ.. ಸುಮ್ನಿರು .. ಎಂದು ಸಮಾಧಾನ ಮಾಡಿದ್ದಾರೆ.. ಆಮೇಲೆ ಆ ಹುಡುಗಿ ಮದುವೇನೂ ಆಯ್ತು.. ಇವನು ಮಾತ್ರ ಅವಳನ್ನ ಮರೆಯಲೇ ಇಲ್ಲ...’ ಸುಬ್ರಹ್ಮಣ್ಯ ಗಿರಿಧರನ ವೃತ್ತಾಂತವನ್ನು ನಿಲ್ಲಿಸಿ ‘ಇನ್ನೊಂದು ಬಿಯರ್ ಹೇಳಲಾ..

